**ಓ.ಎಸ್. ನಂಃ 482/2017**

**ಪಿ. ಡಬ್ಲ್ಯೂಃ 1**

**ದಿನಾಂಕ 05.12.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಯ ಪರ ಃ ಶ್ರೀ.ಎಸ್.ಎಸ್.ಜಿ. ವಕೀಲರಿಂದಃ</u>**

1. ನನ್ನ ಗಂಡನ ಹೆಸರು ಜಗದೀಶ ಅಂತ ಇರುತ್ತದೆ. ನನ್ನ ಗಂಡನ ತಂದೆ ಅಂದರೆ ನನ್ನ ಮಾವನ ಹೆಸರು ನಿಂಗೇಗೌಡ ಅಂತ ಇರುತ್ತದೆ. ನನ್ನ ಮಾವನಾದ ನಿಂಗೇಗೌಡರಿಂದ ನನ್ನ ಗಂಡನಾದ ಜಗದೀಶ ರವರಿಗೆ ನಾಟನಹಳ್ಳಿ ಗ್ರಾಮದ ಸರ್ವೇ ನಂಬರ್ 57/1 ರಲ್ಲಿ 1 ಎಕರೆ 15 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸಾಕ್ಷಿಯು ಸರ್ವೇ ನಂಬರ್ 57/1 ರಲ್ಲಿ ಕೇವಲ 1 ಎಕರೆ 8 ಗುಂಟೆ ಜಮೀನು ಮಾತ್ರ ನನ್ನ ಮಾವನಾದ ನಿಂಗೇಗೌಡರಿಂದ ನನ್ನ ಗಂಡನಾದ ಜಗದೀಶ ರವರಿಗೆ ಬಂದಿರುತ್ತದೆ ಎಂದು ನುಡಿದಿರುತ್ತಾರೆ.

2. ನನ್ನ ಮಾನನಿಂದ ನನ್ನ ಗಂಡನಿಗೆ ಬಂದಿದ್ದ ಸರ್ವೇ ನಂಬರ್ 57/1 ರ 1 ಎಕರೆ 15 ಗುಂಟೆ ಜಮೀನಿನ ಪೈಕಿ 15 ಗುಂಟೆ ಜಮೀನನ್ನು 1996 ರಲ್ಲಿ ನನ್ನ ಗಂಡ ಬಿ.ವೈ ರಾಮಲಿಂಗೇಗೌಡ ಬಿನ್ ಯೋಗೇಗೌಡರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ 15 ಗುಂಟೆ ಜಮೀನು ಮಾರಾಟ ಮಾಡಿದ ನಂತರದ ಉಳಿದ 1 ಎಕರೆ ಜಮೀನು 25 ಗುಂಟೆ ಸರ್ವೇ ನಂಬರ್ 57/1 ರಲ್ಲಿ ಹಾಗೂ 15 ಗುಂಟೆ ಸರ್ವೇ ನಂಬರ್ 57/3 ರಲ್ಲಿ ಪೋಡಾಗಿ ಪ್ರತ್ಯೇಕವಾಗಿರುತ್ತದೆ ಎಂದರೆ ಸರಿ. ಸರ್ವೇ ನಂಬರ್ 57/1 ಮತ್ತು 57/3 ರಲ್ಲಿ ಇದ್ದ ಸದರಿ 1 ಎಕರೆ ಜಮೀನನ್ನು ದಿನಾಂಕ 26.07.1999 ರಂದು ಪ್ರತಿವಾದಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾವು ಬಿ.ವೈ ರಾಮಲಿಂಗೇಗೌಡರಿಗೆ ಮಾರಾಟ ಮಾಡಿದ್ದ 15 ಗುಂಟೆ ಜಮೀನು ಬೇರೆ ಜಮೀನಾಗಿದ್ದು, ನಮ್ಮ 1 ಎಕರೆ 8 ಗುಂಟೆ ಜಮೀನಿನ ಪೈಕಿ 1 ಎಕರೆ ಜಮೀನು ಪ್ರತಿವಾದಿಗೆ ಮಾರಾಟ ಮಾಡಿದ ನಂತರ ನಮಗೆ 8 ಗುಂಟೆ ಜಮೀನು ಉಳಿದಿರುತ್ತದೆ ಎಂದು ಸ್ವತಃ ನುಡಿದಿರುತ್ತಾರೆ.

3. ಪೂರ್ವಕ್ಕೆ–ಸರಕಾರಿ ಕಟ್ಟೆ ಪಶ್ಚಿಮಕ್ಕೆ–ಶ್ರೀಧರರವರ ಜಮೀನು, ಉತ್ತರಕ್ಕೆ–ಶಶಿಧರರವರು ಜಮೀನು ಮತ್ತು ದಕ್ಷಿಣಕ್ಕೆ–ಪ್ರತಿವಾದಿಯ ಜಮೀನು ಈ ಚೆಕ್ಕುಬಂಧಿಗಳು ಪ್ರತಿವಾದಿಯ ಸರ್ವೇ ನಂಬರ್ 57/3 ರಲ್ಲಿರುವ 15 ಗುಂಟೆ ಜಮೀನಿನ ಚೆಕ್ಕುಬಂಧಿಗಳು ಎಂದರೆ ಸರಿ. ಮೇಲೆ ಹೇಳಿದ ರೀತಿಯಲ್ಲಿ 15 ಗುಂಟೆ ಜಮೀನನ್ನು ಬಿ.ವೈ ರಾಮಲಿಂಗೇಗೌಡರಿಗೆ ಹಾಗೂ 1 ಎಕರೆ ಜಮೀನನ್ನು ಪ್ರತಿವಾದಿಗೆ ಮಾರಾಟ ಮಾಡಿದ ನಂತರ ನಮಗೆ ಸರ್ವೇ ನಂಬರ್ 57 ರಲ್ಲಿ ಯಾವುದೇ ಜಮೀನು ಉಳಿದಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮಗೆ 8 ಗುಂಟೆ ಜಮೀನು ಉಳಿದಿರುತ್ತದೆ ಎಂದು ಸ್ವತಃ ನುಡಿದಿರುತ್ತಾರೆ. ನಾವು ಎಂದಿಗೂ ದಾವಾ ಆಸ್ತಿಯ ಸ್ವಾಧೀನದಲ್ಲಿ ಇಲ್ಲ ಹಾಗೂ ಪ್ರತಿವಾದಿಯೇ ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

4. ದಾವಾ ಆಸ್ತಿಯ ಸಂಬಂಧ ಕಂದಾಯ ಕಟ್ಟಿದ ರಸೀದಿಗಳನ್ನು ಮತ್ತು ಭೂ ಹಿಡುವಳಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಆದರೆ ಸದರಿ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ಸರ್ವೇ ನಂಬರ್ 57/3 ರಲ್ಲಿ ನಮಗೆ ಯಾವುದೆ ಜಮೀನು ಉಳಿಯದಿದ್ದರು ಸಹ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**